# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : ಮೇರಿ ಲೂಯಿ ಬರ್ಕ್ ಸಂಗ್ರಹಾನುವಾದ : ಸ್ವಾಮಿ ವೀರೇಶಾನಂದ

ಭಾಗ ೧೦

## ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ *(ಮುಂದುವರಿದ ಭಾಗ)*

**ಸ್ವಾ**ಮಿ ವಿವೇಕಾನಂದರು ಸರ್ವಧರ್ಮ ಸಮ್ಮೇಳನದಲ್ಲಿ ಪ್ರಸ್ತುತಪಡಿಸಿದ ಹಿಂದೂಧರ್ಮದ ಬಗೆಗಿನ ಪ್ರಬಂಧವು ಅಪಾರ ಮೆಚ್ಚುಗೆಯನ್ನು ಪಡೆದುಕೊಂಡಿತು. ವಿಲಿಯಮ್ ಅರ್ನೆಸ್ಟ್ ಎನ್ನುವವನು ಬಹಳ ವರ್ಷಗಳ ನಂತರ ಹೀಗೆ ಬರೆಯುತ್ತಾನೆ: ''ನಾವೆಲ್ಲರೂ ನಮ್ಮ ಜೀವನದಲ್ಲಿ ಹಲವಾರು ಪರಿಹಾರವಾಗದ ಸಮಸ್ಯೆಗಳನ್ನು ಹೊತ್ತುಕೊಂಡಿರುತ್ತೇವೆ. ಅವುಗಳನ್ನು ವ್ಯಕ್ತಪಡಿಸುವುದು ಹೇಗೆ ಎಂದು ನಮಗೆ ಗೊತ್ತಿರುವುದಿಲ್ಲ. ಇವುಗಳಿಗೆ ಶಾಶ್ವತ ಪರಿಹಾರವನ್ನು ನೀಡುವ ಒಂದು ಜೀವನ ತತ್ತ್ವಶಾಸ್ತ್ರವನ್ನು ಕಂಡುಕೊಳ್ಳುವುದು ವಿರಳವೇ ಸರಿ. ಈ ಅನ್ವೇಷಣೆಗೆ ಸೂಕ್ತ ಸಮಾಧಾನವನ್ನು ಕೊಡುವ ವ್ಯಕ್ತಿಯನ್ನು ಭೇಟಿಮಾಡುವುದು ಕೂಡ ಅಪೂರ್ವವೇ. ಅಂಥ ಜೀವನ ವಿಧಾನದಿಂದ ಮಾತ್ರವೇ ಬಿಡುಗಡೆ ಸಾಧ್ಯ.

''ಸರ್ವಧರ್ಮ ಸಮ್ಮೇಳನದಲ್ಲಿ ನೆರೆದಿದ್ದ ಸಾವಿರಾರು ಸಭಿಕರಲ್ಲಿ ನಾನೂ ಒಬ್ಬ. ಇಷ್ಟಾದರೂ, ಸ್ವಾಮಿ ವಿವೇಕಾನಂದರನ್ನು ಭೇಟಿಮಾಡಿದ್ದು ನನ್ನ ಪಾಲಿಗೆ ಒಂದು ಮಹತ್ವದ ಘಟನೆ. ನಾನು ಕೊಲಂಬಿಯನ್ ವಸ್ತುಪ್ರದರ್ಶನಕ್ಕೆ ಒಬ್ಬ ಸಾಮಾನ್ಯ ದರ್ಶಕ ಮಾತ್ರ. ಅದರಲ್ಲಿನ ಹಲವು ವಸ್ತುಪ್ರದರ್ಶನಗಳನ್ನು ನೋಡುವುದರಲ್ಲಿ ಮಾತ್ರ ನನ್ನ ಆಸಕ್ತಿ ಇತ್ತು. ಇದನ್ನು ಬಿಟ್ಟರೆ, ನಾನು ತಲೆಕೆಡಿಸಿಕೊಂಡಿದ್ದು, ನಾನು ಅನುಭವಿಸುತ್ತಿರುವ ಸಮಸ್ಯೆಗೆ ಮಾತ್ರ.

''ನಾನು ಹರ್ಬರ್ಟ್ ಸ್ಪೆನ್ಸರ್ ಅನ್ನು ಅಧ್ಯಯನ ಮಾಡಿದ್ದೆ. ಆತನ ಎಲ್ಲ ಗ್ರಂಥಗಳೂ ನನಗೆ ದಕ್ಕಿದ್ದವು. ಅವನ ವಾದಸರಣಿಯಿಂದ ನಾನು ಪ್ರಭಾವಿತನಾಗಿದ್ದೆನು. ಆತನು ಕ್ರೈಸ್ತ ಧರ್ಮವು ಬರಿಯ ಭ್ರಮೆ ಎಂದು ಹೇಳುತ್ತಾನೆ. ಆದರೆ ಕ್ರೈಸ್ತಧರ್ಮ ಮಾತ್ರವೇ ಏಕಮಾತ್ರ ಧರ್ಮವಲ್ಲ. ಸರ್ವಧರ್ಮ ಸಮ್ಮೇಳನದಲ್ಲಿ ಇತರ ಧರ್ಮದ ಪ್ರತಿನಿಧಿಗಳು ಕೂಡ ಇದ್ದರು. ಅವರು ನನ್ನ ಈ ಮಾನಸಿಕ ಒತ್ತಡಕ್ಕೆ ಒಂದು ಒಳನೋಟವನ್ನು ನೀಡಬಲ್ಲರು ಎಂದು ನನಗೆ ಅನ್ನಿಸುತ್ತಿತ್ತು. ಹಾಗೆಂದೇ ನಾನು ಅವರುಗಳ ಭಾಷಣವನ್ನು ಕೇಳಲು ಹೋಗುತ್ತಿದ್ದೆ. ನನಗೆ ಕಾರ್ಯಕ್ರಮವೇನೂ ಗೊತ್ತಿರಲಿಲ್ಲ. ಆದರೆ ದೈವವಶಾತ್ ವಿವೇಕಾನಂದರ ಭಾಷಣಕ್ಕೇ ನಾನು ಹೋಗಿದ್ದೆನು.



''ಅವರು ಒಂದು ಸಂಪ್ರದಾಯದ ನಿಲುವಿನಲ್ಲಿ ವಾದ ಮಾಡುತ್ತಿರುವಂತೆ ಕಂಡುಬರಲಿಲ್ಲ; ಅಥವಾ ಯಾವುದೋ ಗ್ರಂಥದಿಂದ ಉಲ್ಲೇಖಿಸುತ್ತಿರುವಂತೆಯೂ ಕಂಡುಬರಲಿಲ್ಲ. ಅವರು ತಮ್ಮ ಸ್ವಂತ ಅನುಭವದ ಆಧಾರದ ಮೇಲೆ ಮತ್ತು ತಮ್ಮದೇ ಆದ ನಿಶ್ಚಯಭಾವದಿಂದ ಮಾತನಾಡುತ್ತಿದ್ದರು. ನಾನು ಕೇಳಿದ ಆ ಭಾಷಣವನ್ನು ಅವರು ಈ ವಾಕ್ಯದಿಂದ ಸಂಪನ್ನಗೊಳಿಸಿದರು. ಅದು ಇನ್ನೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ಅದೆಂದರೆ, 'ಮಾನವರನ್ನು ಪಾಪಿಗಳು ಎಂದು ಕರೆಯುವುದೇ!? ಮಾನವರನ್ನು ಪಾಪಿಗಳು ಎಂದು ಕರೆಯುವುದೇ ದೊಡ್ಡ ಪಾಪ!'

''ಕ್ರೈಸ್ತಧರ್ಮದಲ್ಲಿ ಮಾನವರೆಲ್ಲರೂ ಮೂಲತಃ ಪಾಪಿಗಳೇ ಎಂದು ನಮಗೆ ಹೇಳಿಕೊಟ್ಟಿದ್ದರು. ಹೀಗಾಗಿ ಅಲ್ಲಿ ನೆರೆದಿದ್ದ ಸಭಿಕರೆಲ್ಲರೂ ಸ್ವಾಮಿಗಳ ಈ ಮಾತನ್ನು ಕೇಳಿ ಸ್ತಂಭೀಭೂತರಾಗಿ ಹೋದರು. ಇಡೀ ಸಭಾಭವನವೇ ನಿಶ್ಶಬ್ದವಾಯಿತು. ಮುಂದೆ ವಿವೇಕಾನಂದರು ಏನು ಹೇಳುವರೋ ಎಂದು ಸಭಿಕರು ಎದುರು

ನೋಡುತ್ತಿದ್ದರು. ಮುಂದೆ ಅವರು ಏನು ಭಾಷಣ ಮಾಡಿದರು ಎನ್ನುವುದು ನನ್ನ ನೆನಪಿಗೆ ಸ್ಪಷ್ಟವಾಗುತ್ತಿಲ್ಲ. ಆದರೆ ಅವರ ಮಾತುಗಳು ಒಂದು ಸಂದೇಶವನ್ನು ಸಾರಿ ಹೇಳುತ್ತಿದ್ದವು. ಆ ಸಂದೇಶ ಹೀಗಿತ್ತು: 'ಎಲ್ಲ ಮನುಷ್ಯರಲ್ಲಿಯೂ ದಿವ್ಯತೆಯ ಸಾರವು ಅಡಗಿದೆ. ಸತ್ಯತತ್ತ್ವವು ಏಕಮಾತ್ರವಾಗಿದೆ. ಅದನ್ನೇ ಬ್ರಹ್ಮತತ್ತ್ವ ಎನ್ನುತ್ತಾರೆ. ನಮ್ಮಲ್ಲಿ ಪ್ರತಿಯೊಬ್ಬರ ಸಾರಭೂತ ವಾದ ಸತ್ವವೇ ಅದು'

''ನನ್ನ ಪಾಲಿಗಂತೂ ಈ ಸಿದ್ಧಾಂತವು ನಾನು ಅಧ್ಯಯನ ಮಾಡಿದ್ದ ವೈಜ್ಞಾನಿಕ ಮನೋವಿಜ್ಞಾನಕ್ಕೆ ಸಂಪೂರ್ಣ ತದ್ವಿರುದ್ಧ ವಾಗಿತ್ತು. ನಾವು ಈ ಭಾವನೆಗಳ ಬೆಳಕಿನಲ್ಲಿ ಜೀವನವನ್ನು ನಡೆಸ ಬೇಕು ಮತ್ತು ನಮ್ಮ ಆಂತರಂಗಿಕ ಅನುಭವಗಳು ಇವುಗಳಿಗೆ ಹೊಂದುತ್ತವೆಯೇ ಎಂದು ಪರೀಕ್ಷಿಸಿಕೊಳ್ಳಬೇಕು. ಆದರೆ ನನ ಗಂತೂ ಖಚಿತವಾಗಿತ್ತು, ಈ ವ್ಯಕ್ತಿಯು (ಸ್ವಾಮಿ ವಿವೇಕಾ ನಂದರು) ತಮ್ಮ ಅನುಭವದ ಜ್ಞಾನದ ಮೇಲೆಯೇ ಮಾತ ನಾಡುತ್ತಿದ್ದಾರೆ, ಬೇರೆ ಯಾರೋ ಇವರಿಗೆ ಹೇಳಿದ ವಿಷಯಗಳ ಮೇಲೆ ಅಲ್ಲ ಎಂದು. ಅವರಿಗೆ ಗ್ರಂಥಜ್ಞಾನ ಅಧಿಕವಾಗಿತ್ತು. ಆದರೆ ಅವರು ತಮ್ಮ ಅನುಭೂತಿಯ ಜ್ಞಾನದಿಂದಲೇ ಈ ಜಗತ್ತಿನಲ್ಲಿ ತಮ್ಮ ಸ್ಥಾನದ ಅರಿವನ್ನು ತಿಳಿದುಕೊಂಡಿದ್ದರು. ಪ್ರಪಂಚದ ಬಗ್ಗೆ ಅವರ ದೃಷ್ಟಿಯು ಅಂತಿಮವಾದುದು ಎಂದು ನನಗೆ ಅನ್ನಿಸುತ್ತಿತ್ತು. ಒಂದಂತೂ ನನಗೆ ಸ್ಪಷ್ಟವಾಯಿತು: ಹರ್ಬರ್ಟ್ ಸ್ಪೆನ್ಸರ್ ಹೇಳಿದ್ದೇ ಕಡೆಯ ವಾಕ್ಯವಲ್ಲ. ಅದಲ್ಲದೆ, ನನ್ನ ಸ್ವಂತ ಆಧ್ಯಾತ್ಮಿಕ ಅನುಭವವು ಸ್ವಾಮಿ ವಿವೇಕಾನಂದರ ನಿಶ್ಚಯಭಾವಕ್ಕೆ ತಾಳೆಹೊಂದುತ್ತಿತ್ತು. ಇಂಥ ಆಧ್ಯಾತ್ಮಿಕ ಅನು ಭವವನ್ನು ಹರ್ಬರ್ಟ್ ಸ್ಪೆನ್ಸರ್ ಸಾರಾಸಗಟಾಗಿ ತಿರಸ್ಕರಿಸು ತ್ತಾನೆ.''

ಸರ್ವಧರ್ಮ ಸಮ್ಮೇಳನದಲ್ಲಿ ಒಂದು ವಿವಾದ ಬೂದಿ ಮುಚ್ಚಿದ ಕೆಂಡದ ಹಾಗೆ ಹೊಗೆಯಾಡುತ್ತಿತ್ತು. ಇದೆಂದರೆ, ''ಕ್ರೈಸ್ತಧರ್ಮವು ಎಲ್ಲ ಧರ್ಮಗಳಿಗಿಂತಲೂ ಉತ್ಕೃಷ್ಟವಾದ ಧರ್ಮವೇ, ಇಲ್ಲವೆ?'' ಎಂದು. ನಿಜವಾಗಿ ನೋಡಿದರೆ ಸರ್ವ ಧರ್ಮ ಸಮ್ಮೇಳನ ಆಯೋಜಿತವಾಗಿದ್ದೇ ಕ್ರೈಸ್ತಧರ್ಮದ ಉತ್ಕೃ ಷ್ಟತೆಯನ್ನು ಎತ್ತಿಹಿಡಿಯಲು. ಆದರೆ ಸರ್ವಧರ್ಮ ಸಮ್ಮೇಳನ ದಲ್ಲಿ ಪ್ರಭಾವಶಾಲಿ ಭಾಷಣಗಳನ್ನು ಮಾಡಿದ ಪೂರ್ವದೇಶದ ಪ್ರತಿನಿಧಿಗಳು ತಮ್ಮ ತಮ್ಮ ಧರ್ಮಗಳ ಉತ್ತಮ ಗುಣಗಳನ್ನು ಸಭಿಕರಿಗೆ ಪರಿಚಯ ಮಾಡಿಕೊಟ್ಟರು. ಇದು ಕ್ರೈಸ್ತ ಪ್ರತಿನಿಧಿ ಗಳಲ್ಲಿ ಅಹಸನೆಯ ಭಾವವನ್ನು ಉಂಟುಮಾಡಿತು. ಅವರು ಸರ್ವಧರ್ಮ ಸಮ್ಮೇಳನದ ವೇದಿಕೆಯ ಮೇಲೆಯೇ ಪೂರ್ವ ದೇಶಗಳ ಧರ್ಮಗಳನ್ನು ಸಾರಾಸಗಟಾಗಿ ಟೀಕೆ ಮಾಡಲು ಆರಂ ಭಿಸಿದರು. ಇದಕ್ಕೆ ಚೀನಾ, ಭಾರತ ಮತ್ತು ಜಪಾನ್ ದೇಶಗಳಿಂದ ಬಂದಿದ್ದ ಪ್ರತಿನಿಧಿಗಳು ಬಹಳ ಸೌಮ್ಯವಾಗಿಯೇ ಪ್ರತಿಕ್ರಯಿಸಿ ದರು. ಆದರೂ ಕ್ರೈಸ್ತಪಾದ್ರಿಗಳ ಆಟಾಟೋಪ ನಿಲ್ಲಲಿಲ್ಲ. ಹೀಗಾಗಿ ಸ್ವಾಮಿ ವಿವೇಕಾನಂದರು ಇದಕ್ಕೆ ತಮ್ಮ ಉತ್ತರವನ್ನು ನೀಡಬೇಕಾ ಯಿತು. ಅವರು ಅಂಥ ಒಂದು ಸಂದರ್ಭದಲ್ಲಿ ಹೀಗೆ ಹೇಳಿ ದರು: ''ಅಮೆರಿಕೆಯ ಕ್ರೈಸ್ತ ಬಾಂಧವರೇ, ಕ್ರೈಸ್ತರಲ್ಲದವರ ಆತ್ಮಗಳನ್ನು ಕಾಪಾಡುವುದಕ್ಕೆ ಇಲ್ಲಿಂದ ಕ್ರೈಸ್ತ ಮಿಷನರಿಗಳನ್ನು ಕಳಿಸಿಕೊಡಲು ನೀವು ಉತ್ಸುಕರಾಗಿದ್ದೀರಿ. ಆದರೆ ಹಸಿವಿನಿಂದ ನರಳುತ್ತಿರುವ ಅವರ ದೇಹಗಳನ್ನು ರಕ್ಷಿಸುವುದಕ್ಕೆ ನೀವು ಏನು ತಾನೇ ಮಾಡಿದ್ದೀರಿ? ಭಾರತದಲ್ಲಿ ತಿಂಗಳಿಗೆ ೫೦ ಸೆಂಟ್‌ಗಿಂತ ಕಡಮೆ ವರಮಾನವಿರುವ ೩೦೦,೦೦೦,೦೦೦ ಗಂಡಸರು ಮತ್ತು ಹೆಂಗಸರು ಇದ್ದಾರೆ. ಕ್ರೈಸ್ತಪಾದ್ರಿಗಳು ಅವರಿಗಾಗಿ ಏನು ಮಾಡಿದ್ದಾರೆ? ಅಮೆರಿಕೆಯ ಸಹೋದರರೇ, ಪೂರ್ವ ದೇಶಗಳ ಅತ್ಯಂತ ಆವಶ್ಯಕತೆ ಧರ್ಮವಲ್ಲ. ನಮಗೆ ಬೇಕಾದಷ್ಟು ಧರ್ಮ ಈಗಾಗಲೇ ನಮ್ಮಲ್ಲಿದೆ. ನನ್ನ ಜನತೆಗೆ ಬೇಕಾಗಿರುವುದು ಅನ್ನ, ರೊಟ್ಟಿಗಳು. ಆದರೆ ಅವರಿಗೆ ಈಗ ನೀಡಲಾಗುತ್ತಿರುವುದು ಕಲ್ಲು. ಹಸಿವಿನಿಂದ ನರಳುತ್ತಿರುವ ಮನುಷ್ಯನಿಗೆ ತತ್ತ್ವಶಾಸ್ತ್ರ ವನ್ನು ಉಪದೇಶಿಸುವುದು ನಿಜಕ್ಕೂ ಅವನನ್ನು ಅವಹೇಳನ ಮಾಡಿದಂತೆ. ನನ್ನ ದೇಶದ ಜನರಿಗಾಗಿ ಭಿಕ್ಷೆ ಮಾಡಲು ನಾನಿಲ್ಲಿಗೆ ಬಂದಿದ್ದೇನೆ. ಅಮೆರಿಕೆಯ ಜನರಿಂದ ಸಹಾಯವನ್ನು ಯಾಚಿಸಿ ಬಂದಿದ್ದೇನೆ. ಆದರೆ ಇಲ್ಲಿಗೆ ಬಂದ ಮೇಲೆ ನನಗೆ ಗೊತ್ತಾಯಿತು, ಕ್ರೈಸ್ತ ಜನರಿಂದ, ಈ ಕ್ರೈಸ್ತನಲ್ಲದವನು ಏನನ್ನಾದರೂ ನಿರೀಕ್ಷಿಸು ವುದು ಬಹಳ ಕಷ್ಟ ಎಂದು.''

ಇಷ್ಟೆಲ್ಲ ಟೀಕಾಪ್ರಹಾರವಾಗುತ್ತಿದ್ದರೂ ಸರ್ವಧರ್ಮ ಸಮ್ಮೇ ಳನದಲ್ಲಿ ಸೇರಿದ್ದ ಅಮೆರಿಕೆಯ ಜನತೆ ಸ್ವಾಮೀಜಿಯವರ ಪ್ರತಿ ಯೊಂದು ಮಾತಿಗೂ ಅಪಾರ ಕರತಾಡನವನ್ನು ಮಾಡುತ್ತಿದ್ದರು. ಇದೊಂದು ಅದ್ಭುತ ಸಂಗತಿಯೇ ಆಗಿತ್ತು.

ಸ್ವಾಮಿ ವಿವೇಕಾನಂದರ ಈ ಮಾತುಗಳನ್ನು ಡಾ. ಆಲ್ಫ್ರೆಡ್ ಡಬ್ಲ್ಯೂ ಮೊಮರಿ ಎಂಬ ಇಂಗ್ಲೆಂಡಿನಿಂದ ಬಂದ ಪ್ರತಿನಿಧಿಯು ಕೇಳಿಸಿಕೊಳ್ಳುತ್ತಿದ್ದರು. ಅವರಿಗೆ ಈಗ ಅರ್ಥವಾಯಿತಂತೆ, ವೃತ್ತ ಪತ್ರಿಕೆಗಳು ಸರ್ವಧರ್ಮ ಸಮ್ಮೇಳನವನ್ನು 'ಶತಮಾನದ ಮೈಲು ಗಲ್ಲು' ಎಂದು ಏಕೆ ತಾನೇ ಬಣ್ಣಿಸುತ್ತಿವೆ ಎಂದು. ಅವರು ಉದ್ಗರಿ ಸುತ್ತಾರೆ: ''ಮಾನವ ಜನಾಂಗದ ಇತಿಹಾಸದಲ್ಲಿಯೇ ಇದು ಶ್ರೇಷ್ಠವಾದ ಘಟನೆ. ಈ ಸಮ್ಮೇಳನವು ರೂಪುಗೊಂಡದ್ದು ಅಮೆ ರಿಕ ಜನತೆಯ ಹೃದಯಗಳಿಂದ. ಟೀಕೆಟಿಪ್ಪಣಿಗಳನ್ನು ಕೂಡ ಉತ್ಸಾಹದಿಂದ ಸ್ವೀಕರಿಸುತ್ತಿರುವ ಇಲ್ಲಿನ ಜನತೆಯ ಔದಾರ್ಯ ವನ್ನು ನಾನು ಅಭಿನಂದಿಸುತ್ತೇನೆ. ನಾನೇ ಒಬ್ಬ ಅಮೆರಿಕೆಯ ಪ್ರಜೆ ಎಂಬ ಅಭಿಮಾನವನ್ನು ಅದು ನನಗೆ ಉಂಟುಮಾಡು ತ್ತಿದೆ'' ಎಂದು.

ಆದರೆ ಕ್ರೈಸ್ತ ಸಮುದಾಯದಲ್ಲಿಯೇ ಕೆಲವರು ಉದಾರ ಮನೋಭಾವದ ಜನರು ಸ್ವಾಮೀಜಿಯವರ ಮಾತುಗಳನ್ನು ಸೌಹಾರ್ದಯುತವಾಗಿ ಸ್ವೀಕರಿಸಿದರು. ತಮ್ಮ ತಪ್ಪುಗಳನ್ನು ಒಪ್ಪಿ ಕೊಂಡರು. ಸ್ವಾಮಿ ವಿವೇಕಾನಂದರು ಈ ಮೂಲಕ ಭಾರತ

ದೇಶದಲ್ಲಿನ ನಿಜವಾದ ಪರಿಸ್ಥಿತಿಯನ್ನು ಎಲ್ಲರಿಗೂ ಮನವರಿಕೆ ಮಾಡಿಕೊಡಲು ಪ್ರಯತ್ನಿಸಿ ಸಫಲರಾದರು.

ಸ್ವಾಮಿ ವಿವೇಕಾನಂದರು ಅಧಿಕೃತವಾಗಿ ನಾಲ್ಕು ಪ್ರವಚನಗಳನ್ನು ಸರ್ವಧರ್ಮ ಸಮ್ಮೇಳನದಲ್ಲಿ ನೀಡಿದರು. ಇದಕ್ಕೆ ಹೊರತಾಗಿ, ಹಲವಾರು ಸಂದರ್ಭಗಳಲ್ಲಿ ಅವರು ಅಘೋಷಿವಾಗಿ ಮಾತನಾಡಿದ್ದಾರೆ. ಸೆಪ್ಟೆಂಬರ್, ೨೬, ೧೮೯೩ ಸಮ್ಮೇಳನದ ಕಡೆಯ ದಿನವಾಗಿತ್ತು. ಅಂದು ಬೌದ್ಧ ಧರ್ಮದ ಬಗ್ಗೆ ವಿಚಾರ ಮಂಥನ ನಡೆಯಿತು. ಚಿಕಾಗೋ ಇಂಟರ್ ಓಷನ್ ಎನ್ನುವ ಪತ್ರಿಕೆಯು ಸೆಪ್ಟೆಂಬರ್ ೨೮ರ ತನ್ನ ಸಂಚಿಕೆಯಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ ಹೀಗೆ ಬರೆಯಿತು:

''ಸಾಯಂಕಾಲದ ಕಾರ್ಯಕ್ರಮಕ್ಕೆ ಒಂದು ಗಂಟೆಗಿಂತಲೂ ಮುಂಚೆಯೇ ಸಭಾಂಗಣವು ಸಭಿಕರಿಂದ ಕಿಕ್ಕಿರಿದು ನೆರೆದಿತ್ತು. ಈ ಸಮಾವೇಶದ ವಿಷಯ: 'ಬೌದ್ಧಧರ್ಮದ ಸಮರ್ಥನೆ.' ವೇದಿಕೆಯ ಮೇಲೆ ಇದ್ದ ಸಿಲೋನಿನ ಧರ್ಮಪಾಲ, ವಿವೇಕಾನಂದ ಮತ್ತಿತರ ಸಂನ್ಯಾಸಿಗಳಿಗೆ ಸಭಿಕರು ಹಾರ್ದಿಕವಾಗಿ ಸ್ವಾಗತಿಸಿ ಹರ್ಷೋದ್ಗಾರ ಮಾಡಿದರು. ಲಂಡನ್ನಿನ ಡಾ. ಆಲ್ಫ್ರೆಡ್ ಡಬ್ಲ್ಯೂ ಮೊಮರಿ (ಅವರ ನೆನಪುಗಳನ್ನು ನಾವು ಈಗಾಗಲೇ ನೋಡಿದ್ದೇವೆ) ಅವರು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದರು. ತಮ್ಮ ಪ್ರಬಂಧವನ್ನು ಮಂಡಿಸಿದ ನಂತರ, ಧರ್ಮಪಾಲರು ಸ್ವಾಮಿ ವಿವೇಕಾನಂದರನ್ನು ಬೌದ್ಧಧರ್ಮದ ವಿಮರ್ಶೆ ಮಾಡುವಂತೆ ಕೇಳಿಕೊಂಡರು. ಸ್ವಾಮಿ ವಿವೇಕಾನಂದರು ಭಾಷಣ ಮಾಡಲು ನಿಂತಾಗಲೆಲ್ಲ ಪ್ರಚಂಡ ಕರತಾಡನವಾಗುತ್ತಿತ್ತು. ಇಂದೂ ಕೂಡ ಅದೇ ರೀತಿ ಆಯಿತು. ಅವರು ಸಭಾಧ್ಯಕ್ಷರ ಪಕ್ಕದಿಂದ ಮುಂದೆ ಸರಿದಾಗ, ಜನರೆಲ್ಲರೂ ಹರ್ಷೋದ್ಗಾರವನ್ನು ಮಾಡಿದರು. ಸ್ವಾಮಿ ವಿವೇಕಾನಂದರು, ಬೌದ್ಧಧರ್ಮದ ಬಗ್ಗೆ ತಮಗೆ ಒಳ್ಳೆಯ ಮಾತುಗಳಲ್ಲದೆ ಹೇಳಲು ಬೇರೇನೂ ಇಲ್ಲ ಎಂದು ನುಡಿದರು. ತಮ್ಮ ಸಂಸ್ಕೃತಿಯು ಹಲವಾರು ಪೌರಸ್ತ್ಯ ಧರ್ಮಗಳಿಗೆ ನೆಲೆವೀಡಾಗಿದೆ ಎಂದು ಸಭಿಕರಿಗೆ ನೆನಪು ಮಾಡಿಕೊಟ್ಟರು. ಪರಸ್ಪರ ಸಹನೆ, ಆತ್ಯಂತಿಕ ಸತ್ಯವೊಂದಿದೆ ಎಂಬ ವಿಶ್ವಾಸ - ಇವುಗಳು ಎಲ್ಲೆಲ್ಲಿ ಕಂಡು ಬರುವುದೋ, ಆ ಎಲ್ಲ ಧರ್ಮಗಳೂ ಸರಿಯಾದ ಮಾರ್ಗಗಳೇ ಎಂದು ಭಾರತೀಯ ಸಂಸ್ಕೃತಿಯು ದೃಢವಾಗಿ ನಂಬುತ್ತದೆ ಎಂದು ಅವರು ಮನಗಾಣಿಸಿದರು. ಸ್ವಾಮಿ ವಿವೇಕಾನಂದರು ಹೀಗೆ ತಮ್ಮ ವಿದ್ವತ್ತಿನಿಂದ ಸಭಿಕರ ಮನಸ್ಸನ್ನು ಸೂರೆಗೊಂಡರು. ಅವರ ಪಾಂಡಿತ್ಯವು ಲಲಿತವಾದ ಮಾತುಗಳ ಮೂಲಕ ಹೊರಹೊಮ್ಮುತ್ತ ಸಭಿಕರನ್ನು ಮುದಗೊಳಿಸುತ್ತಿತ್ತು. ಅವರು ಭಾಷಣವನ್ನು ಮಗಿಸಿದಾಗ, ಪ್ರಚಂಡ ಕರತಾಡನವಾಯಿತು.

''ಸ್ವಾಮಿ ವಿವೇಕಾನಂದರು ತಮ್ಮ ಭಾಷಣದ ಕಡೆಯಲ್ಲಿ ನುಡಿದ ಹೃತ್ಪೂರ್ವಕ ಮಾತುಗಳಿಗೆ ನೀಡಿದ ಹೃದಯಸ್ಪರ್ಶಿ ಪ್ರತಿಕ್ರಿಯೆಯಾಗಿತ್ತು ಈ ಕರತಾಡನ — ಎಂದು ಹೇಳಬಹುದು. ಸ್ವಾಮೀಜಿಯವರು ಹೀಗೆ ನುಡಿದರು:

'ಹಿಂದೂಧರ್ಮವು ಬೌದ್ಧಧರ್ಮವಿಲ್ಲದೆ ಬಾಳಲಾರದು. ಬೌದ್ಧಧರ್ಮವೂ ಅಷ್ಟೇ, ಹಿಂದೂಧರ್ಮದ ನೆರವಿಲ್ಲದೆ ಬಾಳಲಾರದು. ಆದ್ದರಿಂದ ಪರಸ್ಪರ ಭೇದದಿಂದ ಆದ ನಷ್ಟವೇನು ಎಂಬುದನ್ನು ತಿಳಿದುಕೊಳ್ಳಿ. ಬೌದ್ಧರು ಮತ್ತು ಬ್ರಾಹ್ಮಣರ ನಡುವೆ ಮೂಡಿದ ಕಂದಕ ಭಾರತದ ಅವನತಿಗೆ ಕಾರಣವಾಯಿತು ಬ್ರಾಹ್ಮಣನ ಅದ್ಭುತ ಧೀಶಕ್ತಿ ಮತ್ತು ಆ ಮಹಾ ಆಚಾರ್ಯ ಬುದ್ಧನ ಹೃದಯ ವೈಶಾಲ್ಯ, ಅತ್ಮೋನ್ನತ್ಯ ಮತ್ತು ಅದ್ಭುತವಾದ ವಿಶ್ವಾನುಕಂಪ - ಇವುಗಳನ್ನು ಸಂಗಮಗೊಳಿಸೋಣ.' ''

## ಶ್ರೀಮಾತೆಯವರ ಉಪದೇಶಗಳು



ಮನುಷ್ಯ ಭಗವಂತನನ್ನು ಮರೆತೇಬಿಟ್ಟಿದ್ದಾನೆ. ಆದ್ದರಿಂದ ಯಾವಾಗ ಆವಶ್ಯಕತೆಯಿದೆಯೋ, ಆಗ ಭಗವಂತ ತಾನಾಗಿಯೇ ಒಮ್ಮೊಮ್ಮೆ ಬಂದು, ಸಾಧನೆ ಮಾಡಿ, ಇತರರಿಗೆ ದಾರಿ ತೋರಿಸಿ ಕೊಡುತ್ತಾನೆ. ಈ ಬಾರಿ ಭಗವಂತ (ಶ್ರೀರಾಮಕೃಷ್ಣ ಅವತಾರದ ಮೂಲಕ) ತ್ಯಾಗವನ್ನು ತೋರಿಸಿಕೊಟ್ಟಿದ್ದಾನೆ. ಅವರು ನೂರು ವರ್ಷಗಳವರೆಗೆ ಶಿಷ್ಯರೊಂದಿಗೆ (ಸೂಕ್ಷ್ಮರೂಪದಲ್ಲಿ) ಇರುತ್ತಾರೆ ಎಂದಿದ್ದಾರೆ.

*'ಶ್ರೀಶಾರದಾದೇವಿ ವಚನವೇದ', ಪು.೨೭೧-೭೨*

ಸಂಸಾರ ಭಗವಂತನಿಗೆ ಹೊರತಾಗಿದೆಯೆ? ಅವನು ಎಲ್ಲೆಲ್ಲೂ ಇದ್ದಾನೆ. ಭಗವಂತ ನಿನ್ನನ್ನು ಎಲ್ಲಿ ಹೇಗಿಡುತ್ತಾನೋ, ಅಲ್ಲೇ ಸಂತೋಷದಿಂದ ಇರು. ಭಗವಂತನನ್ನು ಪ್ರಾರ್ಥಿಸುವುದು, ಅವನನ್ನು ಪಡೆಯುವುದು — ಇದೇ ಗುರಿ. ಅವನನ್ನು ಪ್ರಾರ್ಥಿಸಿದರೆ ಅವನು ನಿನ್ನ ಕೈಹಿಡಿದು ಕರೆದುಕೊಳ್ಳುತ್ತಾನೆ. ಅವನನ್ನು ಅವಲಂಬಿಸಿದ ಮೇಲೆ ನೀನು ಯಾವುದೇ ಭಯಪಡಬೇಕಾಗಿಲ್ಲ.

ಇನ್ನೊಂದು ಮಾತು : ಗುರು ಶಿಷ್ಯ ಇಬ್ಬರೂ ಒಂದೆಡೆ ವಾಸ ಮಾಡಬಾರದು. ಏಕೆಂದರೆ, ಇಬ್ಬರೂ ಒಂದೆಡೆ ಇದ್ದರೆ ಗುರುವಿನ ದೈನಂದಿನ ಚಟುವಟಿಕೆಗಳನ್ನು ನೋಡಿ ಅನೇಕ ವೇಳೆ ಅವನನ್ನು ಸಾಮಾನ್ಯ ವ್ಯಕ್ತಿಯೆಂದು ಭಾವಿಸಬಹುದು. ಅದರಿಂದ ಶಿಷ್ಯನಿಗೆ ಹಾನಿಯಾಗುವುದು.

*'ಶ್ರೀಶಾರದಾದೇವಿ ವಚನವೇದ', ಪು.೨೯೧*